FDA - Kannada

**ಈ ಪ್ರಶ್ನೆಪತ್ರಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : 386) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : 387) ಎಂಬ ಎರಡು ವಿಷಯದ ಪ್ರಶ್ನೆಪತ್ರಿಕೆಗಳಿವೆ. ಅಭ್ಯರ್ಥಿಗಳು ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆಯ್ಕೆ ಮಾಡಿ ಉತ್ತರಿಸಬೇಕು. ಅಭ್ಯರ್ಥಿಯು ತಾನು ಆಯ್ಕೆ ಮಾಡಿಕೊಂಡು ಉತ್ತರಿಸಬೇಕಾಗಿರುವ ವಿಷಯದ (ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್) ಮುಂದಿನ ವೃತ್ತವನ್ನು ಸ್ಪಷ್ಟವಾಗಿ ಎನ್‌ಕೋಡ್ ಮಾಡತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಈ ರೀತಿ ಮಾಡಲು ತಪ್ಪಿದ್ದಲ್ಲಿ ಓ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುಗೊಳಿಸಲಾಗುವುದು.**

**ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.**

**ಪ್ರಶ್ನೆಪತ್ರಿಕೆ ವರ್ಷನ್ ಕೋಡ್**

**A**

**2021**

**ಪ್ರಶ್ನೆಪುಸ್ತಿಕೆ**

9' 19

**ಸಾಮಾನ್ಯ ಕನ್ನಡ (ಪತ್ರಿಕೆ - II)**

**ಗರಿಷ್ಠ ಸಮಯ : 1½ ಗಂಟೆಗಳು** | **ವಿಷಯ ಸಂಕೇತ : 386** | **ಗರಿಷ್ಠ ಅಂಕಗಳು : 100**

**ಸೂಚನೆಗಳು**

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿ ಕಂಡುಬಂದಲ್ಲಿ ನಿಮ್ಮ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆಪತ್ರಿಕೆಯೊಂದಿಗೆ ಬದಲಾಯಿಸಿಕೊಳ್ಳತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಪ್ರಶ್ನೆಪತ್ರಿಕೆಯಲ್ಲಿನ ಪುಟಗಳನ್ನು ಸರಿಯಾಗಿ ಪರಿಶೀಲಿಸದೇ ದೋಷಪೂರಿತ ಪ್ರಶ್ನೆಪತ್ರಿಕೆಯನ್ನೇ ಉಪಯೋಗಿಸಿದಲ್ಲಿ ಇದಕ್ಕೆ ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.
2. ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮತ್ತು ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು. ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.
3. **ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿ ಹಾಗೂ ನಿಮಗೆ ನೀಡಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯು ಒಂದೇ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ವ್ಯತ್ಯಾಸವಿದ್ದಲ್ಲಿ, ಓ.ಎಂ.ಆರ್. ಉತ್ತರ ಹಾಳೆಯಲ್ಲಿ ತಿಳಿಸಿರುವ ಅದೇ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನೇ ಸಂವೀಕ್ಷಕರಿಂದ ಪಡೆದುಕೊಳ್ಳತಕ್ಕದ್ದು.**
4. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು ಇರುತ್ತವೆ.
5. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆಪತ್ರಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| | | | | | | |

6. **ಈ ಪ್ರಶ್ನೆಪತ್ರಿಕೆಯು 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು 4 ಆಯ್ಕೆಗಳನ್ನು ಒಳಗೊಂಡಿರುತ್ತದೆ. ನೀಡಿರುವ ಆಯ್ಕೆಗಳಲ್ಲಿ ಒಂದು ಸರಿಯಾದ ಉತ್ತರವನ್ನು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಗುರುತು ಮಾಡಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು. ಒಂದು ವೇಳೆ ಒಂದಕ್ಕಿಂತ ಹೆಚ್ಚಿನ ಉತ್ತರಗಳನ್ನು ಎನ್‌ಕೋಡ್ (ಗುರುತು) ಮಾಡಿದಲ್ಲಿ ಆ ಉತ್ತರಗಳನ್ನು ಅಸಿಂಧುವೆಂದು ಪರಿಗಣಿಸಲಾಗುವುದು.
7. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಓ.ಎಂ.ಆರ್. ಉತ್ತರ ಹಾಳೆಯ ಮೇಲೆ ಕೇವಲ **ಕಪ್ಪು ಅಥವಾ ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಲ್ಲಿ** ಮಾತ್ರ ಗುರುತು ಮಾಡಬೇಕು.
8. **ಅಭ್ಯರ್ಥಿಯು ತಮ್ಮ personalised ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿ ಹಾಗೂ ನಾಮಿನಲ್ ರೋಲ್‌ನ ತಮ್ಮ ಅಂಕಣದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿಯು ಒಂದೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ವ್ಯತ್ಯಾಸ ಕಂಡು ಬಂದಲ್ಲಿ ಅಭ್ಯರ್ಥಿಯು ಯಾವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನು ಉಪಯೋಗಿಸುತ್ತಾರೆ ಎಂಬುದರ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡತಕ್ಕದ್ದು. ಇಲ್ಲದಿದ್ದಲ್ಲಿ ಅಭ್ಯರ್ಥಿಯ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯನ್ನೇ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.**
9. ಒಂದು ವೇಳೆ ಅಭ್ಯರ್ಥಿಯು ಬೇರೊಬ್ಬ ಅಭ್ಯರ್ಥಿಯ personalised ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಂತಹ ಓ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.
10. ಅಭ್ಯರ್ಥಿಯು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಯ ಓ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.
11. ಅಭ್ಯರ್ಥಿಯು Non-personalised ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಭ್ಯರ್ಥಿಯು ನೋಂದಣಿ ಸಂಖ್ಯೆಯನ್ನು ಒದಗಿಸಿರುವ ಸ್ಥಳದಲ್ಲಿ ಬರೆದು ಸಂಬಂಧಪಟ್ಟ ವೃತ್ತವನ್ನು ತುಂಬಬೇಕು ಹಾಗೂ ತಮ್ಮ ಪ್ರಶ್ನೆಪತ್ರಿಕೆ ಶ್ರೇಣಿಯನ್ನು ಕಡ್ಡಾಯವಾಗಿ ಬರೆಯಬೇಕು. ಮತ್ತು ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡಬೇಕು. ಇಲ್ಲದಿದ್ದಲ್ಲಿ, ಅಂತಹ ಅಭ್ಯರ್ಥಿಯ ಓ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.
12. ನಾಮಿನಲ್ ರೋಲ್ (ಹಾಜರಾತಿ ಹಾಳೆ)ನಲ್ಲಿ ಅಭ್ಯರ್ಥಿಯು ತಪ್ಪದೇ ಸಹಿ ಹಾಕತಕ್ಕದ್ದು.
13. ಅಭ್ಯರ್ಥಿಯು ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಅಂತಹ ಓ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.
14. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಓ.ಎಂ.ಆರ್. ಉತ್ತರಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
15. ಪರೀಕ್ಷೆ ಮುಗಿದ ನಂತರ ಸಂವೀಕ್ಷಕರಿಂದ ಹಿಂಪಡೆದ ಕಾರ್ಬನ್ ರಹಿತ ಓ.ಎಂ.ಆರ್. ಉತ್ತರ ಹಾಳೆಯ (Candidate Copy) ಪ್ರತಿಯನ್ನು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವವರೆಗೆ ಜೋಪಾನವಾಗಿ ಸಂರಕ್ಷಿಸಿಟ್ಟುಕೊಳ್ಳಬೇಕು ಮತ್ತು ಆಯೋಗವು ಯಾವುದೇ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದಲ್ಲಿ, ತಪ್ಪದೇ ಅದೇ ಪ್ರತಿಯನ್ನು ಹಾಜರುಪಡಿಸಬೇಕು.
16. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪತ್ರಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪತ್ರಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಸ್ಮಾರ್ಟ್ ವಾಚ್‌ಗಳು, ಕ್ಯಾಲ್ಕ್ಯುಲೇಟರ್‌ಗಳನ್ನು ಅಥವಾ ಇತರ ಎಲೆಕ್ಟ್ರಾನಿಕ್/ಕಮ್ಯುನಿಕೇಶನ್ ಉಪಕರಣಗಳನ್ನು ಪರೀಕ್ಷಾ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**



*Note : English version of the instructions is printed on the back cover of this booklet.*

WWW.SHIKARAT.COM

| GENERAL KANNADA PAPER - II | | | | | | | |
|---|---|---|---|---|---|---|---|
| ASSISTANT/FIRST DIVISION ASSISTANT GROUP 'C' POSTS COMPETITIVE EXAMINATION | | | | | | | |
| Examination held on 28-02-2021 (2:00 PM 3:30 PM) No Negative Marks | | | Subject Code: 386 | | Total marks: 100 One mark for each question | | |
| KEY CHART | | | | | | | |
| Question Booklet Series - 'A' | | | | | | | |
| Question Number | Key Answer | Question Number | Key Answer | Question Number | Key Answer | Question Number | Key Answer |
| 1 | 2 | 26 | 2 | 51 | 2 | 76 | 3 |
| 2 | 4 | 27 | 3 | 52 | 3 | 77 | 1 |
| 3 | 3 | 28 | 3 | 53 | 4 | 78 | 2 |
| 4 | 1 | 29 | 2 | 54 | 4 | 79 | 4 |
| 5 | 4 | 30 | 3 | 55 | 2 | 80 | 3 |
| 6 | 4 | 31 | 1 | 56 | 4 | 81 | 2 |
| 7 | 2 | 32 | 1 | 57 | 2 | 82 | 4 |
| 8 | 1 | 33 | 1 | 58 | 2 | 83 | 4 |
| 9 | 2 | 34 | 1 | 59 | 3 | 84 | 3 |
| 10 | 2 | 35 | 1 | 60 | 3 | 85 | 1 |
| 11 | 3 | 36 | 3 | 61 | 2 | 86 | 2 |
| 12 | 4 | 37 | 4 | 62 | 4 | 87 | 4 |
| 13 | 4 | 38 | 3 | 63 | 4 | 88 | 4 |
| 14 | 4 | 39 | 1 | 64 | 1 | 89 | 4 |
| 15 | 2 | 40 | 2 | 65 | 3 | 90 | 1 |
| 16 | 2 | 41 | 1 | 66 | 1 | 91 | 4 |
| 17 | 2 | 42 | 3 | 67 | 3 | 92 | 2 |
| 18 | 3 | 43 | 3 | 68 | 2 | 93 | 4 |
| 19 | 2 | 44 | 3 | 69 | 2 | 94 | 2 |
| 20 | 1 | 45 | 1 | 70 | 2 | 95 | 4 |
| 21 | 3 | 46 | 1 | 71 | 4 | 96 | 4 |
| 22 | 1 | 47 | 3 | 72 | 4 | 97 | 4 |
| 23 | 4 | 48 | 1 | 73 | 3 | 98 | 4 |
| 24 | 1 | 49 | 4 | 74 | 1 | 99 | 1 |
| 25 | 2 | 50 | 3 | 75 | 4 | 100 | 4 |

**ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 1 ರಿಂದ 9 ರವರೆಗೆ) ಗೆರೆ ಹಾಕಿ ಸೂಚಿಸಿದ ಭಾಗ ತಪ್ಪಾಗಿದ್ದರೆ ಮುಂದೆ ಕೊಡಲಾದ ಮೂರು ಪರ್ಯಾಯ ರೂಪಗಳಲ್ಲಿ ಸರಿಯಾದ ರೂಪವನ್ನು ಗುರುತಿಸಿ ತಪ್ಪಿಲ್ಲದಿದ್ದರೆ "ತಪ್ಪಿಲ್ಲ" ಎಂದು ಗುರುತಿಸಿ.**

1. ರಾಮ ಕ್ಷತ್ರಧರ್ಮದಲ್ಲೇ ನಡೆದ.
   (1) ಕ್ಷತಿಧರ್ಮ
   (2) ಕ್ಷಾತ್ರಧರ್ಮ
   (3) ಕ್ಷತ್ರಧಾರ್ಮ
   (4) ತಪ್ಪಿಲ್ಲ

2. ಅರ್ಜುನ ಶಿವನಿಂದ ಪಾಶುಪತಾಸ್ತ್ರವನ್ನು ಪಡೆದ.
   (1) ಪಶುಪತಸ್ತ್ರ
   (2) ಪಾಶಪತುಸ್ತ್ರ
   (3) ಪಾಶುಪಾತಾಸ್ತ್ರ
   (4) ತಪ್ಪಿಲ್ಲ

3. ಬ್ರಾಹ್ಮಣನಿಗೆ ಮಂತ್ರನುಷ್ಠಾನವೇ ಆಧಾರ.
   (1) ಮುಂತಾನುಷ್ಠಾನ
   (2) ಮಂತ್ರಾನಷ್ಠಾನ
   (3) ಮಂತ್ರಾನುಷ್ಠಾನ
   (4) ತಪ್ಪಿಲ್ಲ

4. ಸಭೆ ಹರ್ಷೋದ್ಗಾರದಿಂದ ಮುಗಿಯಿತು.
   (1) ಹರ್ಷೋದ್ಗಾರ
   (2) ಹಷೋದ್ಗರ
   (3) ಹರ್ಷೋದ್ಗಾರಾ
   (4) ತಪ್ಪಿಲ್ಲ

5. ಪಾಂಡವರು ಕಳುಹಿಸಿದ ಕೃಷ್ಣಸಂಧಾನ ಮುರಿದುಬಿತ್ತು.
   (1) ಕೃಷ್ಣಂ ಸಧಾನ
   (2) ಕೃಷ್ಣಾ ಸಂದಾನ
   (3) ಕೃಷ್ಣಾ ಸಂಧಾನ
   (4) ತಪ್ಪಿಲ್ಲ



WWW.SHIKARAT.COM

6. ಕೋಟ್ಯಂತರ ರೂಪಾಯಿ ಹಗರಣವನ್ನು ಬಯಲಿಗೆಳೆದರು.

(1) ಕೋಟ್ಯಾಂತರ

(2) ಕೋಟ್ಯಂತಾರ

(3) ಕೋಟಿಯಂತರ

(4) ತಪ್ಪಿಲ್ಲ

7. ಸಾಲಭಾದೆಯಿಂದ ನರಳಿದರು.

(1) ಸಾಲಭಾಧೆ

(2) ಸಾಲಬಾಧೆ

(3) ಸಾಲಬಾದೆ

(4) ತಪ್ಪಿಲ್ಲ

8. ಒಳ್ಳೆಯ ಕಾರ್ಯಕ್ಕೆ ಮೀನಾಮೇಷ ಎಣಿಸಬಾರದು.

(1) ಮೀನಮೇಷ

(2) ಮೀನಾಮೇಶ

(3) ಮೀನಮೇಸ

(4) ತಪ್ಪಿಲ್ಲ

9. ಅವರು ದೃಡೀಕರಣ ಕೇಳಿದರು.

(1) ಧೃಡೀಕರಣ

(2) ದೃಢೀಕರಣ

(3) ದ್ರುಢೀಕರಣ

(4) ಧೃಢೀಕರಣ

ಕೆಳಗಿನ ಪದಗಳಿಗೆ (ಪ್ರಶ್ನೆ ಸಂಖ್ಯೆ 10 ರಿಂದ 19 ರವರೆಗೆ) ಸರಿಯಾದ ಅರ್ಥವನ್ನು ಗುರುತಿಸಿರಿ.

10. ಪಂಕ

(1) ಕಮಲ

(2) ಕೆಸರು

(3) ತಿಳಿನೀರು

(4) ಪಣ

11. ಅಂತರ್ಧಾನ

(1) ಮಾಯಾಜಾಲ

(2) ಅರ್ಥೈಸಿಕೋ

(3) ಮಾಯವಾಗು

(4) ಜೀರ್ಣಿಸಿಕೊ

12. ತೃಣ

(1) ಅಲ್ಪ

(2) ಗೀಳು

(3) ಹೀನ

(4) ಹುಲ್ಲು



WWW.SHIKARAT.COM

13. ಉಂಡಲಿಗೆ

(1) ಉಂಡನಾಲಿಗೆ

(2) ಎಳ್ಳುಂಡೆ

(3) ಕಜ್ಜಾಯ

(4) ಕಡುಬು

14. ಖೇಡ

(1) ಇಂದ್ರ

(2) ಖೇಚರ

(3) ಭಾನು

(4) ಹಳ್ಳಿ

15. ಅಳಿನಿ

(1) ಮರಿದುಂಬಿ

(2) ಹೆಣ್ಣುದುಂಬಿ

(3) ಗಂಡು ದುಂಬಿ

(4) ದೊಡ್ಡದುಂಬಿ

16. ಅಡಕ

(1) ಅಡಗಿಸು

(2) ಲಗತ್ತು

(3) ದೊಡ್ಡದು ಮಾಡು

(4) ಅಡಕೆ

17. ಅರ್ಕ

(1) ಚಂದ್ರ

(2) ಸೂರ್ಯ

(3) ನಕ್ಷತ್ರ

(4) ಆಕಾಶ

18. ವಿಬುಧ

(1) ದಡ್ಡ

(2) ಸೋಮಾರಿ

(3) ಪಂಡಿತ

(4) ದುಷ್ಟ

19. ಕೂಷ್ಮಾಂಡ

(1) ಸೋರೆಕಾಯಿ

(2) ಕುಂಬಳಕಾಯಿ

(3) ಪಡುವಲಕಾಯಿ

(4) ಹಿರೇಕಾಯಿ



WWW.SHIKARAT.COM

ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 20 ರಿಂದ 25 ರವರೆಗೆ) ಗೆರೆ ಎಳೆದ ಭಾಗದಲ್ಲಿ ಕೊಡಲಾದ ಆಂಗ್ಲ/ಇಂಗ್ಲೀಷ್ ಪದಗಳಿಗೆ ನಾಲ್ಕು ಕನ್ನಡ ರೂಪಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು ಗುರುತಿಸಿ.

20. ಎಲ್ಲಾ ರಾಜ್ಯಗಳೂ ತನ್ನದೇ ಆದ ಸ್ಟೇಟ್ ಎಂಬ್ಲಮ್ ಹೊಂದಿರುತ್ತವೆ.

(1) ರಾಜ್ಯ ಲಾಂಛನ

(2) ರಾಜ್ಯ ಚಿಹ್ನೆ

(3) ರಾಜ್ಯ ಸಂಕೇತ

(4) ರಾಜ್ಯ ಚಿತ್ರ

21. ದಿನವೂ ಕಮ್ಯುಟ್ ಮಾಡಲಾರದೆ ಕೆಲಸಕ್ಕೆ ರಾಜೀನಾಮೆ ನೀಡಿದರು.

(1) ಓಡಿಹೋಗು

(2) ತಡವಾಗಿ ಹೋಗು

(3) ಹೋಗಿ – ಬರುವ ಪ್ರಯಾಣ

(4) ಮೆಲ್ಲನೆ ಹೋಗು

22. ಅವರಿಗೆ ಕನ್ನಡದಲ್ಲಿ 'ಫ್ಲೂಯೆನ್ಸ್' ಇದೆ.

(1) ನಿರರ್ಗಳತೆ

(2) ಪ್ರಾಸಬದ್ಧತೆ

(3) ಗೊತ್ತಿಲ್ಲದಿರುವುದು

(4) ವಿರಳತೆ

23. ಪ್ರತಿಯೊಬ್ಬ ಲೇಖಕನಿಗೂ ತನ್ನದೇ ಆದ ಪೊಯೆಟಿಕ್ ಲೈಸೆನ್ಸ್ ಇರುತ್ತದೆ.

(1) ಕಾವ್ಯ ನಾಮ

(2) ಕಾವ್ಯ ದರ್ಶನ

(3) ಕಾವ್ಯ ವಿಡಂಬನೆ

(4) ಕಾವ್ಯ ಸ್ವಾತಂತ್ರ್ಯ

24. ಲಿರಿಕ್ ಎನ್ನುವ ಸಾಹಿತ್ಯ ಪ್ರಕಾರವು ಇಂಗ್ಲಿಷ್‌ನಿಂದ ಬಂತು.

(1) ಭಾವಗೀತೆ

(2) ಕಥನಗೀತೆ

(3) ಗೀತರೂಪಕ

(4) ನವ್ಯ ಕವನ



WWW.SHIKARAT.COM

25. ವಿದೇಶಕ್ಕೆ ಪ್ರಯಾಣಿಸಬೇಕೆಂದರೆ ಪಾಸ್‌ಪೋರ್ಟ್ ಕಡ್ಡಾಯವಾಗಿರುತ್ತದೆ.

(1) ಪರವಾನಗಿ ಪತ್ರ

(2) ರಹದಾರಿ ಪತ್ರ

(3) ಅನುಜ್ಞಾ ಪತ್ರ

(4) ರಫ್ತು ಪತ್ರ

26. 'ದೇವರೇ ನೀನೇ ಈ ಸಂಕಟದಿಂದ ಪಾರುಮಾಡು' ಈ ವಾಕ್ಯದಲ್ಲಿ 'ನೀನೇ' ಎಂಬುದು ________ ಅವ್ಯಯ.

(1) ಕ್ರಿಯಾರ್ಥಕ

(2) ಅವಧಾರಣಾರ್ಥಕ

(3) ಭಾವಬೋಧಕ

(4) ಸಂಬೋಧನವಾಚಕ

27. ಬಸರಿ ಎಂದರೆ ________.

(1) ಹೊಟ್ಟೆಯಲ್ಲಿ ಮಗುವನ್ನುಳ್ಳ ಹೆಂಗಸು

(2) ಬಹಳ ಸರಿಯಾದುದು

(3) ಒಂದು ಜಾತಿಯ ಮರ

(4) ಹೊರಕ್ಕೆ ಹಾಕು

28. 'ಪರ್ವತ' ಎಂಬ ಪದವು ________ ಉದಾಹರಣೆ.

(1) ಅಂಕಿತನಾಮ

(2) ಅನ್ವರ್ಥನಾಮ

(3) ರೂಢನಾಮ

(4) ಭಾವನಾಮ



WWW.SHIKARAT.COM

**Join our Telegram Channel SHIKARAT.COM**
**https://telegram.me/s/shikarat**

**Join our Facebook Page SHIKARAT.COM**
**https://www.facebook.com/shikarat/**

**Join our Instagram SHIKARAT.COM**
**https://www.instagram.com/shikarat_com/**

**Join our Twitter SHIKARAT.COM**
**https://twitter.com/Shikarat_com**

**For more contact us**

**WhatsApp No = 9742928829**

**Email ID= Admin@shikarat.com**

💞 **Sharing is Caring** 💞

😍**If it is helpful Please Share with your friends (WhatsApp and Telegram Group)** 😍

29. 'ಪಡುವಣ' ಎಂಬುದು _______ ವಾಚಕ.

(1) ಪ್ರಕಾರ ವಾಚಕ

(2) ದಿಗ್ವಾಚಕ

(3) ಸಂಖ್ಯಾವಾಚಕ

(4) ಸರ್ವನಾಮ

30. ಸಂಧಿಕಾರ್ಯವಾಗುವಾಗ ಪೂರ್ವಪದದ ಒಂದು ಅಕ್ಷರವು ಸಂಧಿಯಾದ ಪದದಲ್ಲಿ ಇಲ್ಲದಿದ್ದರೆ ಅಂಥ ಸಂಧಿಯನ್ನು _______ ಸಂಧಿ ಎನ್ನುತ್ತೇವೆ.

(1) ಆಗಮ ಸಂಧಿ

(2) ಆದೇಶ ಸಂಧಿ

(3) ಲೋಪ ಸಂಧಿ

(4) ಯಕಾರಾಗಮ ಸಂಧಿ

31. 'ಮೆಲ್ಲ ಮೆಲ್ಲಗೆ ನಡೆ' ಈ ವಾಕ್ಯದಲ್ಲಿ 'ಮೆಲ್ಲ ಮೆಲ್ಲಗೆ' ಎಂಬುದು _______ ಕ್ರಿಯಾ ವಿಶೇಷಣವಾಗಿದೆ.

(1) ರೀತಿ ವಾಚಕ

(2) ಅನುಕರಣ ವಾಚಕ

(3) ಪ್ರಶ್ನೆ ವಾಚಕ

(4) ಆವೃತ್ತಿ ವಾಚಕ

32. 'ಹಾಲಿನಿಂದ' ತುಪ್ಪವು ತಯಾರಾಗುತ್ತದೆ. ಇಲ್ಲಿ 'ಹಾಲಿನಿಂದ' ಎಂಬುದು _______ ವಿಭಕ್ತಿ.

(1) ತೃತೀಯಾ

(2) ಷಷ್ಠಿ

(3) ಸಪ್ತಮಿ

(4) ಪ್ರಥಮ



WWW.SHIKARAT.COM

33. 'ಸುಲಿದ ಬಾಳೆಯ ಹಣ್ಣಿನಂದದಿ' ಎಂಬುದು ________.

(1) ಉಪಮಾಲಂಕಾರ

(2) ರೂಪಕಾಲಂಕಾರ

(3) ಉತ್ಪ್ರೇಕ್ಷಾಲಂಕಾರ

(4) ದೀಪಕಾಲಂಕಾರ

34. ಸಿರಿತನ ಎಂಬುದು

(1) ಭಾವನಾಮ

(2) ಅಂಕಿತನಾಮ

(3) ಅನ್ವರ್ಥನಾಮ

(4) ರೂಢನಾಮ

**ಕೆಳಗಿನ ಪ್ರಶ್ನೆಗಳಲ್ಲಿ (ಪ್ರಶ್ನೆ ಸಂಖ್ಯೆ 35 ಮತ್ತು 36) ಕನ್ನಡ ಮೂಲದ್ದು ಅಲ್ಲದ (ಅನ್ಯ ಭಾಷೆಯಿಂದ ಸ್ವೀಕೃತವಾದ) ಶಬ್ದವನ್ನು ಗುರುತಿಸಿ.**

35. (1) ಭೂಮಿ

(2) ನೀರು

(3) ಬಾನು

(4) ಮೀನು

36. (1) ಕದ

(2) ಮರ

(3) ರಜಾ

(4) ಕರಿದು

**ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ 37 ರಿಂದ 41 ರವರೆಗೆ) ತದ್ಭವ ಪದಗಳನ್ನು ಬರೆಯಿರಿ.**

37. ಕಪಟ

(1) ಗಪಟ

(2) ವಂಚಕ

(3) ಕವಲು

(4) ಕವಡು

38. ಯಜ್ಞ

(1) ಯಾಗ

(2) ಹವನ

(3) ಜನ್ನ

(4) ಹೋಮ



WWW.SHIKARAT.COM

39. ಪತಿವ್ರತೆ

(1) ಹದಿಬದೆ

(2) ಗೃಹಿಣಿ

(3) ಸಾವಿತ್ರಿ

(4) ಹೆಂಗಸು

40. ಭಾಷಾ

(1) ಭಾಸೆ

(2) ಭಾಷೆ

(3) ಭಾಸಾ

(4) ಬಾಶಾ

41. ಯುಗ್ಮ

(1) ಜುಗ್ಗ

(2) ಯುಗ

(3) ಜುಗ

(4) ಜನಿವಾರ

42. ದಾಖಲೆ ಇರುವ ಕನ್ನಡದ ಅತ್ಯಂತ ಪ್ರಾಚೀನ ಪದ

(1) ಅಸಗ

(2) ಅಗಸ

(3) ಇಸಿಲ

(4) ಕಣ್ಣಿಲ

43. ಇದು ಅಚ್ಚಗನ್ನಡದ ಒಂದು ಪದ

(1) ಗ್ರಾಮ

(2) ರಾಜ್ಯ

(3) ಊರು

(4) ಭಾಷೆ

44. ಕನ್ನಡದಲ್ಲಿ ಒಟ್ಟು ________ ವಿಭಕ್ತಿ ಪ್ರತ್ಯಯಗಳಿವೆ.

(1) 6

(2) 7

(3) 8

(4) 9



WWW.SHIKARAT.COM

45. ಇದು ಕರ್ಮಧಾರಯ ಸಮಾಸಕ್ಕೆ ಒಂದು ಉದಾಹರಣೆ.

(1) ಬೆಳ್ಗೊಡೆ

(2) ಅರಮನೆ

(3) ಅಂಗೈ

(4) ಆ ಮನೆ

46. ಕನ್ನಡದ ಮೊಟ್ಟ ಮೊದಲು ಉಪಲಬ್ಧವಾದ ಗ್ರಂಥ.

(1) ಕವಿರಾಜಮಾರ್ಗ

(2) ವಡ್ಡಾರಾಧನೆ

(3) ವಿಕ್ರಮಾರ್ಜುನ ವಿಜಯಂ

(4) ಧರ್ಮ ಪರೀಕ್ಷೆ

47. ಕನ್ನಡ ವರ್ಣಮಾಲೆಯ ವಿವರ ಇರುವ ಕನ್ನಡದ ಒಂದು ಶಾಸನ.

(1) ಹಲ್ಮಿಡಿ ಶಾಸನ

(2) ಜಿನವಲ್ಲಭನ ಶಾಸನ

(3) ಕೆರೆಸಂತೆ ಶಾಸನ

(4) ತಳಂಗೆರೆ ಶಾಸನ

48. ಸ್ವರಕ್ಕೆ ಸ್ವರ ಪರವಾದಾಗ ಕೆಲವು ವೇಳೆ ಸಂಧಿಯಾಗುವುದಿಲ್ಲ. ಇದನ್ನು ವ್ಯಾಕರಣದಲ್ಲಿ ಹೀಗೆ ಹೇಳುತ್ತಾರೆ.

(1) ಪ್ರಕೃತಿ ಭಾವ

(2) ಸಂಧಿ ವಿಕಲ್ಪ

(3) ಕೃದಂತ

(4) ವಿಶೇಷಣ

49. ಕೆ.ಎಸ್. ನರಸಿಂಹಸ್ವಾಮಿಯವರ ಯಾವ ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ ?

(1) ತೆರೆದ ಬಾಗಿಲು

(2) ಮೈಸೂರು ಮಲ್ಲಿಗೆ

(3) ದೀಪದ ಮಲ್ಲಿ

(4) ದುಂಡು ಮಲ್ಲಿಗೆ

50. ಇದು ಪಂಪನ ಬಿರುದುಗಳಲ್ಲೊಂದು.

(1) ಅಮ್ಮನ ಗಂಧವಾರಣ

(2) ಸರ್ವಜ್ಞ

(3) ನಾಡೋಜ

(4) ಕವಿವರ ಕಾಮಧೇನು



WWW.SHIKARAT.COM

51. ಹಂಪೆಯ ಹರೀಶ್ವರನ ವರಸುತನೆಂದು ತನ್ನನ್ನು ಗುರುತಿಸಿಕೊಂಡ ಕವಿ.

(1) ಹರಿಹರ

(2) ರಾಘವಾಂಕ

(3) ಕುಮಾರವ್ಯಾಸ

(4) ಮುದ್ದಣ

52. ಅರ್ಥವನ್ನು ವಿಭಜಿಸುವುದು ಎನ್ನುವುದಕ್ಕೆ ಹೀಗೆ ಹೇಳುತ್ತಾರೆ.

(1) ಸಮಾಸ

(2) ಸಂಧಿ

(3) ವಿಭಕ್ತಿ

(4) ಕೃದಂತ

53. 'ಅಭಿನವ ಪಂಪ' ಎಂದು ತನ್ನನ್ನು ಕರೆದುಕೊಂಡ ಕವಿ.

(1) ಪೊನ್ನ

(2) ರನ್ನ

(3) ಜನ್ನ

(4) ನಾಗಚಂದ್ರ

54. 'ಅಶ್ವತ್ಥಾಮನ್' ಇದು ________ ನಾಟಕ.

(1) ಸಾಮಾಜಿಕ

(2) ಚಾರಿತ್ರಿಕ

(3) ಸುಖಾಂತ

(4) ದುರಂತ

55. 'ಕನ್ನಡದ ಆದಿಕವಿ' ಎಂದು ಗುರುತಿಸುವ ಕವಿ.

(1) ಕುಮಾರವ್ಯಾಸ

(2) ಪಂಪ

(3) ಜನ್ನ

(4) ರನ್ನ

**ಕೆಳಗಿನ ಕ್ರಿಯಾಪದವನ್ನು (ಪ್ರಶ್ನೆ ಸಂಖ್ಯೆ 56 ಮತ್ತು 57) ನಿಷೇದಾರ್ಥಕದಲ್ಲಿ ಬರೆಯಿರಿ.**

56. ತಿನ್ನು

(1) ತಿನ್ನನು

(2) ತಿನ್ನುವುದಿಲ್ಲ

(3) ತಿನ್ನರು

(4) ತಿನ್ನೆನು



WWW.SHIKARAT.COM

57. ಬಂದನು

(1) ಬರುವುದಿಲ್ಲ

(2) ಬರನು

(3) ಬಾರನು

(4) ಬರಲಾರನು

58. ಮಗು ಹುಟ್ಟಿತು ಇದು

(1) ಸಕರ್ಮಕ ಕ್ರಿಯಾಪದ

(2) ಅಕರ್ಮಕ ಕ್ರಿಯಾಪದ

(3) ಪೂರ್ಣ ಕ್ರಿಯಾಪದ

(4) ಸಾಪೇಕ್ಷ ಕ್ರಿಯಾಪದ

59. 'ಮಾಡುವುದಕ್ಕೆ (A) ದೃಢಮನಸ್ಸು (B) ಬೇಕು (C) ಚಾರಣ (D) ಸಂಕಲ್ಪಶಕ್ತಿ (E)' – ಈ ವಾಕ್ಯದ ಸರಿಯಾದ ರೂಪ.

(1) ABCDE

(2) BDEAC

(3) DABEC

(4) EABDC

60. ಕೆಳಗಿನವುಗಳಲ್ಲಿರುವ ಅನುಕರಣವಾಚಿ ಪದವನ್ನು ಗುರುತಿಸಿ.

(1) ಊರೂರು

(2) ಅಲ್ಲಲ್ಲಿ

(3) ಸರಸರ

(4) ಮರಗಿಡ

61. 'ಭಕ್ತಿ ಭಂಡಾರಿ' – ಎಂದು ಪ್ರಸಿದ್ಧರಾದ ವಚನಕಾರರು ಯಾರು ?

(1) ಅಲ್ಲಮಪ್ರಭು

(2) ಬಸವಣ್ಣ

(3) ಅಂಬಿಗರ ಚೌಡಯ್ಯ

(4) ಸಿದ್ಧರಾಮ

62. ಬಟ್ಟೆ – ಈ ಪದದ ನಾನಾರ್ಥಗಳು ಯಾವುವು ?

(1) ವಸ್ತ್ರ ಮತ್ತು ಭೂಮಿ

(2) ವಸ್ತ್ರ ಮತ್ತು ಸೂರ್ಯ

(3) ವಸ್ತ್ರ ಮತ್ತು ಮರ

(4) ವಸ್ತ್ರ ಮತ್ತು ದಾರಿ



WWW.SHIKARAT.COM

63. ಕರಕರಿಸು ಪದದ ಸಮಾನಾರ್ಥಕ ಪದ ________.

(1) ಕಳವಳ

(2) ಮಿತಿ ಮೀರಿ

(3) ಊರುಗೋಲು

(4) ಚಿಂತಿಸು

64. 'ನಜಭಜಜಂಜರಂ' – ಇದು ಯಾವ ವೃತ್ತದ ಲಕ್ಷಣ ?

(1) ಚಂಪಕಮಾಲೆ

(2) ಮಹಾ ಸ್ರಗ್ಧರೆ

(3) ಉತ್ಪಲ ಮಾಲೆ

(4) ಶಾರ್ದೂಲವಿಕ್ರೀಡಿತ

65. ಕುಮಾರವ್ಯಾಸನ ಕೃತಿ ಯಾವುದು ?

(1) ಜೈಮಿನಿ ಭಾರತ

(2) ತೊರವೆ ರಾಮಾಯಣ

(3) ಕರ್ನಾಟಕ ಭಾರತ ಕಥಾಮಂಜರಿ

(4) ಶ್ರೀ ರಾಮಾಯಣ ದರ್ಶನಂ

66. ಉಣ್ಮು ಎಂದರೆ

(1) ಹೊರಹೊಮ್ಮು

(2) ಉಬ್ಬಿರುವ

(3) ಉಂಟು

(4) ಉಡು

67. ವಾರ್ಧಕ ಷಟ್ಪದಿಯ 3 ಮತ್ತು 6 ನೇ ಸಾಲಿನಲ್ಲಿರುವ ಮಾತ್ರೆಗಳ ಒಟ್ಟು ಸಂಖ್ಯೆ ಎಷ್ಟು ?

(1) 28

(2) 30

(3) 32

(4) 34

68. 'ಇವನೊಬ್ಬ' – ಈ ಪದದಲ್ಲಿರುವ ಸಂಧಿ ಯಾವುದು ?

(1) ಆಗಮ ಸಂಧಿ

(2) ಲೋಪ ಸಂಧಿ

(3) ಆದೇಶ ಸಂಧಿ

(4) ಸವರ್ಣದೀರ್ಘ ಸಂಧಿ



WWW.SHIKARAT.COM

69. 'ಬದುಕು' ಬದಲಿಸಬಹುದು – ಇದು ಯಾರ ಕೃತಿ ?

(1) ವೈದೇಹಿ

(2) ನೇಮಿಚಂದ್ರ

(3) ಮಾಲತಿ ಪಟ್ಟಣಶೆಟ್ಟಿ

(4) ಜಿ.ಎಸ್. ಶಿವರುದ್ರಪ್ಪ

**ಈ ಕೆಳಗಿನ ಕೆಲವು ಕನ್ನಡದ ನುಡಿಗಟ್ಟುಗಳನ್ನು (ಪ್ರಶ್ನೆ ಸಂಖ್ಯೆ 70 ರಿಂದ 78 ರವರೆಗೆ) ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆ ಮಾಡಿ ಗುರುತಿಸಿ.**

70. ಅಧಿಕ ಪ್ರಸಂಗ ಮಾಡು

(1) ಹೆಚ್ಚಿಗೆ ಮಾತಾಡು

(2) ತನಗೆ ಸಂಬಂಧವಿಲ್ಲದ ವಿಷಯದಲ್ಲಿ ಭಾಗವಹಿಸು

(3) ಅಲ್ಲದ ಕೆಲಸ ಮಾಡು

(4) ಕೋಪಗೊಳ್ಳು

71. ಕಿವಿ ನೆಟ್ಟಗಾಗು

(1) ಇನ್ನೊಬ್ಬರ ಮಾತಲ್ಲಿ ಬಾಯಿಹಾಕು

(2) ಕದ್ದು ಕೇಳು

(3) ಕಿವಿ ಎತ್ತರಿಸು

(4) ಕುತೂಹಲ ಹೆಚ್ಚಾಗು

72. ಎಂಜಲು ಕೈಯಲ್ಲಿ ಕಾಗೆ ಓಡಿಸದವ

(1) ಪಕ್ಷಿಯನ್ನು ಗೌರವಿಸುವನು

(2) ಸಂಪ್ರದಾಯವಾದಿ

(3) ಸೂಕ್ಷ್ಮ ಸ್ವಭಾವ

(4) ಜಿಪುಣ

73. ಮೈ ಬಗ್ಗಿಸು

(1) ತಲೆಬಾಗಿ ನಡೆ

(2) ಶರಣಾಗು

(3) ಶ್ರಮಪಡು

(4) ಯೋಗಮಾಡು


WWW.SHIKARAT.COM

74. ಹೊಟ್ಟೆಗೆ ಹಾಕಿಕೊ

(1) ಕ್ಷಮಿಸು

(2) ಚೆನ್ನಾಗಿ ತಿನ್ನು

(3) ಕಾಣದ ಹಾಗೆ ಇಡು

(4) ಮರೆತು ಬಿಡು

75. ಎದೆ ತಟ್ಟಿ ಹೇಳು

(1) ಜಂಭದಿಂದ ಹೇಳು

(2) ಅಹಂಕಾರದಿಂದ ಹೇಳು

(3) ವಿನಯದಿಂದ ಹೇಳು

(4) ಧೈರ್ಯದಿಂದ ಹೇಳು

76. ಹಿತ್ತಾಳೆ ಕಿವಿ

(1) ಕಿವಿ ಕೇಳಿಸದವ

(2) ಚುರುಕು ಬುದ್ಧಿ

(3) ಚಾಡಿ ಮಾತು ಕೇಳುವ ಸ್ವಭಾವ

(4) ಒಂದು ಬಗೆಯ ಕಿವಿಯ ಆಭರಣ

77. ಗಗನ ಕುಸುಮ

(1) ಕೈಗೆ ಎಟುಕದ್ದು

(2) ಸುಂದರವಾದ ಹೂವು

(3) ಹುಣ್ಣಿಮೆ ಚಂದ್ರ

(4) ಆಕಾಶದ ನಕ್ಷತ್ರ

78. ತಿರುಕನ ಕನಸು

(1) ಭಿಕ್ಷುಕನ ಕನಸು

(2) ನನಸಾಗದ ಇಚ್ಛೆ

(3) ಈಡೇರಿದ ಬಯಕೆ

(4) ಬಡವನ ಬದುಕು

79. 'ಗುಲಾಬಿ' ಯಾವ ಭಾಷೆಯ ಪದ ?

(1) ಇಂಗ್ಲಿಷ್

(2) ಪೋರ್ಚುಗೀಸ್

(3) ಕನ್ನಡ

(4) ಉರ್ದು



WWW.SHIKARAT.COM

80. 'ಸದಭಿರುಚಿ' ಈ ಪದವನ್ನು ಬಿಡಿಸಿದಾಗ

(1) ಸದ್ + ಅಭಿರುಚಿ

(2) ಸದ್ಯ + ಅಭಿರುಚಿ

(3) ಸತ್ + ಅಭಿರುಚಿ

(4) ಸತ್ + ಅಭಯರುಚಿ

81. 'ಪಶ್ಚಿಮ'ಕ್ಕೆ ಕನ್ನಡದಲ್ಲಿ ಏನೆನ್ನುವರು ?

(1) ಮೂಡಣ

(2) ಪಡುವಣ

(3) ತೆಂಕಣ

(4) ಬಡಗಣ

**ಈ ಕೆಳಗೆ (ಪ್ರಶ್ನೆ ಸಂಖ್ಯೆ 82 ರಿಂದ 86 ರವರೆಗೆ) P Q R S ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.**

82. P. ಮನುಷ್ಯನು ಮಾತ್ರ ಮಾತನಾಡುವ ಕಲೆ ಬಲ್ಲವನಾಗಿದ್ದಾನೆ.

Q. ಈ ಜೀವಜಾಲದಲ್ಲಿ ಕೆಲವೇ ಕೆಲವು ಜೀವಿಗಳು ಮಾತ್ರ ಧ್ವನಿ ಉತ್ಪಾದಿಸುವವುಗಳಾಗಿವೆ. ಅವುಗಳಲ್ಲಿ

R. ಮನುಷ್ಯನ ಮಾತಿಗೆ ಪೂರಕವಾಗಿ ನಗುವೆಂಬ ಅನುಭವದ ಆಭರಣ-ವನ್ನು ದೇವನಿತ್ತ ಕೊಡುಗೆ.

S. ಪ್ರಪಂಚದಲ್ಲಿ ಎಂಭತ್ನಾಲ್ಕು ಲಕ್ಷ ಜೀವರಾಶಿಗಳಿವೆ ಎಂಬ ತರ್ಕವಿದೆ.

(1) Q P S R

(2) S P R Q

(3) R S P Q

(4) S Q P R



WWW.SHIKARAT.COM

**83.** P. ಹರಿಹರನು ರಾಜನಾಗಿ ತನ್ನ ಸಹೋದರರ ನೆರವನ್ನು ಪಡೆದನು.

Q. ಇವರು ಸ್ವತಂತ್ರವಾದ ರಾಜ್ಯವನ್ನು ಸ್ಥಾಪನೆ ಮಾಡಿ ಕನ್ನಡ ಸಂಸ್ಕೃತಿಯನ್ನು ಬೆಳೆಸಿದರು.

R. ರಾಜ್ಯವನ್ನು ವಿವಿಧ ಭಾಗಗಳಾಗಿ ವಿಂಗಡಿಸಿ ಒಬ್ಬೊಬ್ಬರನ್ನು ಒಂದೊಂದು ಭಾಗಕ್ಕೆ ಅಧಿಕಾರಿಯನ್ನಾಗಿ ನೇಮಿಸಿದನು.

S. ವಿಜಯನಗರ ಸಾಮ್ರಾಜ್ಯ ಸಂಗಮ ಪುತ್ರರಾದ ಹಕ್ಕ-ಬುಕ್ಕರಿಂದ ಸ್ಥಾಪಿತ-ವಾಯಿತು.

(1) Q R S P
(2) P Q R S
(3) S R Q P
(4) S Q P R

**84.** P. ಚಂಪುವಿನ ಮೊದಲ ಉಲ್ಲೇಖ 2ನೆಯ ನಾಗವರ್ಮನ ಗ್ರಂಥದಲ್ಲಿ ಬಂದಿದೆ.

Q. ಆದರೆ ಅವನ್ನು ಚಂಪುವೆಂದು ಕರೆದವರು ವಿರಳ.

R. ಅವನ ಸಮಕಾಲೀನನಾದ ಉದಯಾದಿತ್ಯನ ಗ್ರಂಥದಲ್ಲಿಯೂ ಬಂದಿದೆ.

S. ಕನ್ನಡ ಕವಿಗಳಲ್ಲಿ ಕೆಲವರು ಮೊದಲಿನಿಂದಲೇ ಚಂಪುಗಳನ್ನು ಬರೆದಿದ್ದಾರೆ.

(1) R S Q P
(2) Q P R S
(3) S Q P R
(4) P R S Q

**85.** P. ಇದು ಕನ್ನಡ ವೃತ್ತಗಳ ಗಾಯತ್ರಿ ಎಂದು ಕರೆಯುತ್ತಾರೆ.

Q. ಕ್ರಿ.ಶ. 700 ರ ಬಾದಾಮಿ ಶಾಸನದ ಮೂರು ಪದ್ಯಗಳಲ್ಲಿ ಪ್ರಥಮ ದರ್ಶನವಾಗುತ್ತದೆ.

R. ನಾಗವರ್ಮನು ತನ್ನ ಕೃತಿಯಲ್ಲಿ ಉಲ್ಲೇಖಿಸಿರುವ 'ಏಳೆ' ತ್ರಿಪದಿಗೆ ಮೂಲವಾಗಿರಬೇಕು.

S. ತ್ರಿಪದಿ ನಮಗೆ ಉಪಲಬ್ಧವಾದ ಅತ್ಯಂತ ಪ್ರಾಚೀನ ಛಂದೋರೂಪ.

(1) S Q P R
(2) P S R Q
(3) Q S R P
(4) R P Q S

**86.** P. ಕೆಲವರ ಬದುಕು ಸ್ವಾರಸ್ಯಕರವಾಗಿದ್ದರೂ ಸಾಧಾರಣ ಕೃತಿಗಳನ್ನು ರಚಿಸಿದ್ದಾರೆ.

Q. ಒಂದು ಭಾಷೆಯನ್ನೇ ಶ್ರೀಮಂತ-ಗೊಳಿಸುವಂತಹ ಕೃತಿಗಳನ್ನು ರಚಿಸಿ ಕಣ್ಮರೆಯಾಗಿದ್ದಾರೆ.

R. ಕೆಲವರು ದೊಡ್ಡ ಲೇಖಕರಾಗಿ ಹೋಗಿದ್ದಾರೆ.

S. ಆದರೆ ಅಂತಹವರ ಬದುಕು ಸ್ವಾರಸ್ಯಕರವಾಗಿರುವುದಿಲ್ಲ.

(1) P S R Q
(2) R Q S P
(3) S Q P R
(4) Q R P S



WWW.SHIKARAT.COM

**ಕೆಳಗಿನ ಪದಗಳಿಗೆ (ಪ್ರಶ್ನೆ ಸಂಖ್ಯೆ 87 ರಿಂದ 96) ವಿರುದ್ಧಾರ್ಥಕ ಪದಗಳನ್ನು ಗುರುತಿಸಿ.**

87. ಉದಕ

(1) ಸಾಧಕ

(2) ಬಾಧಕ

(3) ಅಧಿಕ

(4) ಅಗ್ನಿ

88. ತಿರೆ

(1) ಕ್ಷೋಣಿ

(2) ಅವನಿ

(3) ಭೂಲೋಕ

(4) ಆಕಾಶ

89. ಸೊಲಪು

(1) ಒನಪು

(2) ಅರಿಪು

(3) ಸಬಲ

(4) ಗಂಭೀರ

90. ಪರ್ಣ

(1) ಅಪರ್ಣ

(2) ವಿಪರ್ಣ

(3) ಸುಪರ್ಣ

(4) ಕುಪರ್ಣ

91. ಮುಂಚು

(1) ಹೆಂಚು

(2) ಕಂಚು

(3) ಸಂಚು

(4) ಹಿಂಚು

92. ಉಕ್ತ

(1) ನಿರುಕ್ತ

(2) ಅನುಕ್ತ

(3) ಮರುಕ್ತ

(4) ಸೆರುಕ್ತ



WWW.SHIKARAT.COM

93. ಇಂಬೆಳಕು

(1) ಚೆಂಬೆಳಕು

(2) ಪೊಂಬೆಳಕು

(3) ನಿಂಬೆಳಕು

(4) ನಿರ್ಬೆಳಕು

94. ಅಂತಿಕ

(1) ಸಮೀಪ

(2) ದೂರ

(3) ಕೊನೆಯ

(4) ಹತ್ತಿರ

95. ಭೂಯಿಷ್ಠ

(1) ಅತಿಶಯವಾದ

(2) ಹೆಚ್ಚಾದ

(3) ಅಧಿಕ

(4) ಕನಿಷ್ಠ

96. ಕಲಿ

(1) ವೀರ

(2) ಧೀರ

(3) ಶೂರ

(4) ಪೇಡಿ

**ಈ ಕೆಳಗೆ ಕೊಟ್ಟ ಶಬ್ದಗಳಲ್ಲಿ (ಪ್ರಶ್ನೆ ಸಂಖ್ಯೆ 97 ರಿಂದ 100 ರವರೆಗೆ) ಒಂದು ಪದ ಉಳಿದ ಗುಂಪಿಗೆ ಸೇರುವುದಿಲ್ಲ. ಅಂತಹ ಪದ ಗುರುತಿಸಿ.**

97. (1) ಆನೆ

(2) ಕುದುರೆ

(3) ರಥ

(4) ಒಂಟೆ

98. (1) ಕಾರು

(2) ಲಾರಿ

(3) ಬಸ್ಸು

(4) ಸೈಕಲ್

99. (1) ಬುದ್ಧ

(2) ಬಸವ

(3) ಅಲ್ಲಮ

(4) ಜಂಗಮ

100. (1) ಕುದುರೆ

(2) ನಾಯಿ

(3) ಸಿಂಹ

(4) ಹಾವು



WWW.SHIKARAT.COM